ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಹಿರಿಯ ಅಧಿಕಾರಿಗಳಿಂದ ನಿಷ್ಪಕ್ಷಪಾತವಾದ ತನಿಖೆ ನಡೆಸಿ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಈ ವಿಷಯವನ್ನು ನಮ್ಮ ಗಮನಕ್ಕೆ ತೆಗೆದುಕೊಂಡು ಬಂದಿದ್ದಾರೆ. ನಾವು ಅಧಿಕಾರಿಗಳಿಂದ ತೆಗೆದುಕೊಂಡಂತಹ ಮಾಹಿತಿ ಪ್ರಕಾರ ಉತ್ತರ ಕೊಟ್ಟಿದ್ದೇವೆ. ಅವರು ಅದು ಸರಿಯಿಲ್ಲವೆನ್ನುವಂತಹ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ, ಹಿರಿಯ ಅಧಿಕಾರಿಗಳ ಮುಖಾಂತರ ಅದರ ಬಗ್ಗೆ ಇನ್ನಷ್ಟು ತನಿಖೆ ಮಾಡಿಕೊಂಡು ಹೆಚ್ಚಿನ ವರದಿ ತರಿಸಿ ಮುಂದಿನ ಕ್ರಮ ನಾವು ತೆಗೆದುಕೊಳ್ಳುತ್ತೇವೆ.

ಆ) ವಿಷಯ: ಮೈಸೂರು ಪೇಪರ್ ಮಿಲ್ಸ್ ನೌಕರರ ನ್ಯಾಯಯುತ ಬೇಡಿಕೆ ಈಡೇರಿಸುವ ಬಗ್ಗೆ

ಶ್ರೀ ಬಿ.ಕೆ. ಸಂಗಮೇಶ್ವರ ಹಾಗೂ ಕಿಮ್ಮನೆ ರತ್ನಾಕರ್(ಭದ್ರಾವತಿ, ತೀರ್ಥಹಳ್ಳಿ): ಭದ್ರಾವತಿ ಮೈಸೂರು ಪೇಪರ್ ಮಿಲ್ಸ್ ಕಾರ್ಖಾನೆಯ ನೌಕರರಿಗೆ ತುಟ್ಟಿಭತ್ಯೆ ನೀಡುವ ಹಾಗೂ ನ್ಯಾಯಯುತ ಬೇಡಿಕೆಗಳ ಈಡೇರಿಸುವ ಬಗ್ಗೆ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಮುರುಗೇಶ್ ಆರ್. ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು): ಮಾನ್ಯ ಅಧ್ಯಕ್ಷರೆ, ಸರ್ಕಾರವು ಘೋಷಿಸಿರುವ ಶೇ. 10.25ರ ಹೆಚ್ಚುವರಿ ತುಟ್ಟಿ ಭತ್ಯೆಯನ್ನು ದಿನಾಂಕ 01.07.2010ರಿಂದ ಕೊಡಬೇಕೆಂದು ಎಂಪಿಎಂ ನೌಕರರ ಸಂಘವು ಒತ್ತಾಯಿಸುತ್ತಿದ್ದು ಇದರ ಮೊತ್ತವು ಮಾಹೆಯಾನ ರೂ. 36.00 ಲಕ್ಷದಷ್ಟಾಗುತ್ತದೆ. ಈ ನಿಟ್ಟಿನಲ್ಲಿ ದಿ: 1.7.2010ರಿಂದ 31.01.2011ರವರೆಗಿನ ಒಟ್ಟು ಬಾಕಿ ತುಟ್ಟಿ ಭತ್ಯೆಯು ರೂ. 288.00 ಲಕ್ಷ ಆಗಿದೆ. ದಿನಾಂಕ 1.1.2011ರಿಂದ ತುಟ್ಟಿಭತ್ಯೆಯ ಮತ್ತೊಂದು ಕಂತು ಹೆಚ್ಚಿಸಲ್ಪಡುವ ನಿರೀಕ್ಷೆ ಇದೆ. ಕಂಪನಿಯ ಹದಗೆಟ್ಟಿರುವ ಆರ್ಥಿಕ ಸ್ಥಿತಿಯ ಕಾರಣವಾಗಿ ಕಂಪನಿಯು ಈ ಹಣವನ್ನು ನೌಕರರಿಗೆ ಕೊಟ್ಟಿಲ್ಲ.

ಸರ್ಕಾರದ ದಿನಾಂಕ 25.8.1994ರ ಸುತ್ತೋಲೆಯಂತೆ ಕಂಪನಿಯು ತುಟ್ಟಿ ಭತ್ಯೆಯ ಬಿಡುಗಡೆಗಾಗಿ ಸರ್ಕಾರವನ್ನು ಕೋರಿದ್ದು, ಸರ್ಕಾರವು ತನ್ನ ದಿನಾಂಕ 14.2.2011ರ ಪತ್ರದಂತೆ ಈ ಪ್ರಸ್ತಾಪವನ್ನು, ಕಂಪನಿಯ ಪ್ರಸ್ತುತ ಹಣಕಾಸಿನ ಪರಿಸ್ಥಿತಿಯನ್ನು ಪರಿಗಣಿಸಿ, ತಿರಸ್ಕರಿಸಿದೆ.

ಪ್ರಸ್ತುತ ಕಂಪನಿಯು ಅದರ ಬೆಳೆಯುತ್ತಿರುವ ನಷ್ಟದ (ಇದು ದಿ: 31.3.2011ರ ವೇಳೆಗೆ ಕಂಪನಿಯ ನಿವ್ವಳ ಆಸ್ತಿ ರೂ. 118.00 ಕೋಟಿಗಳ

ವಿರುದ್ಧವಾಗಿ ರೂ. 200.00 ಕೋಟಿಯನ್ನು ದಾಟುವ ನಿರೀಕ್ಷೆ ಇದೆ) ಕಾರಣವಾಗಿ ತೀವ್ರ ಹಣಕಾಸಿನ ಮುಗ್ಗಟ್ಟಿನ ಪರಿಸ್ಥಿತಿಯನ್ನು ಎದುರಿಸುತ್ತಿದೆ. ಅಸ್ವಸ್ಥ ಕೈಗಾರಿಕಾ ಕಂಪನಿಗಳ ಅಧಿನಿಯಮದ ಪ್ರಕಾರ ಕಂಪನಿಯು ಈಗಾಗಲೇ ಅಸ್ವಸ್ಥ ಆಗಿದೆ. ಎಂಪಿಎಂ ನೌಕರರ ಸಂಘದ ಪದಾಧಿಕಾರಿಗಳಿಗೆ ಕಂಪನಿಯು ತನ್ನ ಪ್ರಸ್ತುತ ಹಣಕಾಸು ಸ್ಥಿತಿಯನ್ನು ವಿವರಿಸಿದ್ದು, ಕಂಪನಿಯು ಹೆಚ್ಚುವರಿ ತುಟ್ಟಿ ಭತ್ಯೆಯನ್ನು ಕೊಡಬೇಕೆಂಬ ಅವರ ಕೋರಿಕೆಯನ್ನು ಪರಿಗಣಿಸಲು ಅದರ ಹಣಕಾಸು ಸ್ಥಿತಿ ಸುಧಾರಿಸುವವರೆಗೆ ಕಂಪನಿಯೊಂದಿಗೆ ಸಹಕರಿಸಬೇಕೆಂದು ಮನವಿ ಮಾಡಿದೆ. ಹೀಗಿದ್ದಾಗ್ಯೂ ಈ ವಿಷಯವು ಹಾಸನದ ಡಿ.ಎಲ್.ಸಿ. (ಉಪ ಕಾರ್ಮಿಕ ಆಯುಕ್ತರು)ಯ ಸಮ್ಮುಖದಲ್ಲಿ ಇದ್ಯಾಗ್ಯೂ ಸಹ, ನೌಕರರ ಸಂಘವು ತಮ್ಮ ಬೇಡಿಕೆಯನ್ನು ಈಡೇರಿಸಬೇಕೆಂದು ಚಳುವಳಿ ನಡೆಸುತ್ತಿದೆ. ಪ್ರಸ್ತುತ ಹಣಕಾಸಿನ ತೀವ್ರ ಮುಗ್ಗಟ್ಟಿನ ಪರಿಸ್ಥಿತಿಯಲ್ಲೂ ಸಹ ಕಂಪನಿಯು ಇತರೆ ಪಾವತಿಗಳನ್ನು ಬದಿಗೊತ್ತಿ, ತನ್ನ ನೌಕರರ ಸಂಬಳ ಮತ್ತು ಇತರೆ ಸೌಲಭ್ಯಗಳನ್ನು ಕಾಲಕಾಲಕ್ಕೆ ನೀಡುತ್ತಿದೆ ಎಂಬುದು ಗಮನಾರ್ಹವಾಗಿದೆ.

ಪ್ರಸ್ತುತ ಆರ್ಥಿಕ ಮುಗ್ಗಟ್ಟು ಮುಂದುವರೆದಲ್ಲಿ ಕಂಪನಿಯು ತನ್ನ ನೌಕರರ ಸಂಬಳ, ಕೂಲಿ ಇತ್ಯಾದಿಗಳನ್ನು (ಮಾಸಿಕ ವೆಚ್ಚ ಅಂದಾಜು ರೂ. 9.00 ಕೋಟಿಗಳಷ್ಟು) ನಿಗದಿತ ದಿನಾಂಕದಂದು ಪಾವತಿ ಮಾಡುವುದೂ ಸಹ ಕಷ್ಟ ಸಾಧ್ಯವಾಗಬಹುದು ಹಾಗೂ ಇವುಗಳನ್ನು ಕಂತುಗಳಲ್ಲಿ ನೀಡಬೇಕಾದಂತಹ ಪರಿಸ್ಥಿತಿ ಒದಗಬಹುದು. ಈ ಎಲ್ಲ ಕಾರಣಗಳಿಂದ ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳು ಕಂಪನಿಗೆ ಸಾಲ ನೀಡುವುದನ್ನು ಸ್ಥಗಿತಗೊಳಿಸಿವೆ. ಅಲ್ಲದೆ ಕಂಪನಿಯನ್ನು "ಹೈ ರಿಸ್ಕ್ ಕಂಪನಿ" ಎಂದು ಬ್ಯಾಂಕ್‌ಗಳು ಪರಿಗಣಿಸಿರುವುದರಿಂದ ಬ್ಯಾಂಕ್‌ಗಳು ಮತ್ತು ಹಣಕಾಸು ಸಂಸ್ಥೆಗಳು ಹೆಚ್ಚುವರಿ ಸಾಲವನ್ನು ನೀಡಲು ನಿರಾಕರಿಸುವ ಕಾರಣವಾಗಿ ಕಂಪನಿಯು ಕಾರ್ಯಾಚರಣೆ ಬಂಡವಾಳದ ಕೊರತೆಯಿಂದಾಗಿ ಅಗತ್ಯವಿರುವ ಸಾಮಗ್ರಿಗಳನ್ನು ಕೊಳ್ಳುವ ಸಾಮರ್ಥ್ಯವು ಕುಂಠಿತಗೊಂಡಿದೆ.

ಪ್ರಸ್ತುತ ಪರಿಸ್ಥಿತಿಯಿಂದ ಹೊರಬರಲು ಕಂಪನಿಯು ಸರ್ಕಾರದ ನೆರವನ್ನು ಕೋರಿದ್ದು ತತ್ಕಾರಣವಾಗಿ ಉಚ್ಚ ಸ್ತರದ ಸಮಿತಿಯು ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ 07.02.2011ರಂದು ಸಭೆ ನಡೆಸಿ, ಈ ವಿಷಯವನ್ನು ಪರಿಶೀಲಿಸುವುದಾಗಿ ಆಶ್ವಾಸನೆ ನೀಡಲಾಗಿದೆ. ಈ ಕಂಪನಿಯ ಪುನರುತ್ಥಾನವು ಸರ್ಕಾರದ ಸಕ್ರಿಯ ಪರಿಗಣನೆಯಲ್ಲಿದೆ.

ದಿನಾಂಕ 25.2.2011ರಂದು ಕಂಪನಿಯ ಆಡಳಿತ ವರ್ಗವು ಭದ್ರಾವತಿಯನ್ನು ನೌಕರರ ಸಂಘಗಳೊಡನೆ ಸುದೀರ್ಘ ಚರ್ಚೆ ಮಾಡಿದ್ದು ಈ ವಿಷಯವನ್ನು ಕಂಪನಿಯ ನಿರ್ದೇಶಕ ಮಂಡಳಿ ಹಾಗೂ ಸರ್ಕಾರದ ಮುಂದೆ ಪ್ರಸ್ತುತಪಡಿಸಲಾಗುವುದೆಂದು ಹಾಗೂ ಪರಿಣಾಮವನ್ನು ದಿ: 31.3.2011ರ ಒಳಗೆ ತಿಳಿಯಪಡಿಸಲಾಗುವುದೆಂದು ತಿಳಿಸಿತು. ಈ ಆಶ್ವಾಸನೆಯನ್ನಾಧರಿಸಿ ನೌಕರ ಸಂಘಗಳು ತಮ್ಮ ಚಳುವಳಿಯನ್ನು ಹಿಂದಕ್ಕೆ ತೆಗೆದುಕೊಂಡಿವೆ.

ಶ್ರೀ ಬಿ.ಕೆ. ಸಂಗಮೇಶ್ವರ್: ಮಾನ್ಯ ಅಧ್ಯಕ್ಷರೆ, ಕಾರ್ಖಾನೆ ನಷ್ಟದಲ್ಲಿರುವುದರಿಂದ ಕಾರ್ಮಿಕರ ಬೇಡಿಕೆಯನ್ನು ಪರಿಗಣಿಸುವುದಕ್ಕೆ ಬರುವುದಿಲ್ಲವೆಂದು ನಮ್ಮ ಸಚಿವರು ಈಗ ಹೇಳಿದ್ದಾರೆ. ಆ ಸರ್ಕ್ಯುಲರ್ ನನ್ನ ಹತ್ತಿರ ಕೂಡ ಇದೆ. 1994ನೇ ಇಸವಿಯಲ್ಲಿ ಕೊಡಬಾರದು ಎಂದು ಎಲ್ಲಿಯೂ ಕೂಡ ಆಗಿಲ್ಲ. ನಮ್ಮ ಕಂಪನಿಯ ಲಾಭದಾಯಕ್ಕನುಗುಣವಾಗಿ ಕೊಡಲೇಬೇಕೆಂದು ಇದೆ. ಕಾರ್ಮಿಕರಿಗೆ ಕಳೆದ ಎಂಟು ತಿಂಗಳಿಂದ ಕೊಡಬೇಕಾಗಿರುವ ತುಟ್ಟಿಭತ್ಯೆಯನ್ನು ಕೊಡಬೇಕೆನ್ನುವ ಕಾರ್ಮಿಕರ ಬೇಡಿಕೆ ನ್ಯಾಯಯುತವಾಗಿದೆ. ಇದನ್ನು ಕೊಡಬೇಕೆಂದು ಲೇಬರ್ ಕಮಿಷನರ್‌ರವರು ಮೊನ್ನೆ ನಡೆದ ಮೀಟಿಂಗ್‌ನಲ್ಲಿ ಹೇಳಿದ್ದರೂ ಕೂಡ ಇವರು ಕೊಡುತ್ತಿಲ್ಲ. ನನ್ನ ಪ್ರಶ್ನೆಯೇನೆಂದರೆ, ಅಲ್ಲಿ ಇವತ್ತು ನಮ್ಮ ಕಾರ್ಮಿಕ ಬಂಧುಗಳಿಂದ ಕಾರ್ಖಾನೆಗೆ ನಷ್ಟವಾಗುತ್ತಿಲ್ಲ. ನಷ್ಟ ಆಗುತ್ತಿರುವುದು ಪರ್ಚೇಸ್ ಮತ್ತು ಸೇಲ್ಸ್‌ನಲ್ಲಿ ವರ್ಷಕ್ಕೆ ಸುಮಾರು 78 ರಿಂದ 80 ಕೋಟಿ ರೂ.ಗಳ ಲಾಸ್ ಆಗುತ್ತಿದೆ. ಈ ವಿಚಾರದ ಬಗ್ಗೆ ನಾನು ಪದೇ ಪದೇ ಸರ್ಕಾರದ ಗಮನಕ್ಕೆ ತರುತ್ತಲೇ ಇದ್ದೇನೆ. ಇದರ ಜೊತೆಗೆ ನಮ್ಮ ಉತ್ಪಾದನೆಯ ವೆಚ್ಚ ಜಾಸ್ತಿಯಾಗುತ್ತಿದೆ. ಈ ಕಾರ್ಖಾನೆ ಸುಮಾರು 75 ವರ್ಷಗಳ ಹಳೆಯದಾಗಿದೆ. ಈ ಕಾರ್ಖಾನೆಯಲ್ಲಿ ಹೊಸ ಆಧುನೀಕರಣದ ಯಂತ್ರಗಳನ್ನು ಉತ್ಪಾದನೆಯಲ್ಲಿ ಉಪಯೋಗಿಸಿದರೆ ಉತ್ಪಾದನೆಯ ವೆಚ್ಚ ಕಡಿಮೆಯಾಗುತ್ತದೆ ಮತ್ತು ಆಗ ಕಾರ್ಖಾನೆ ಲಾಭದಾಯಕವಾಗಿ ನಡೆಯುತ್ತದೆಂದು ನಾವುಗಳು ಸರ್ಕಾರದ ಗಮನಕ್ಕೆ ತಂದರೂ ಕೂಡ ಇದುವರೆಗೂ ಆ ಬಗ್ಗೆ ಗಮನವನ್ನು ಹರಿಸಿಲ್ಲ. ಈ ಭದ್ರಾವತಿ ಎಂ.ಪಿ.ಎಂ. ಕಾರ್ಖಾನೆ ನನ್ನ ಕ್ಷೇತ್ರದಲ್ಲಿರುವುದು. ಅಲ್ಲಿರುವ ನಮ್ಮ ಕಾರ್ಮಿಕ ಬಂಧುಗಳು 16 ದಿವಸಗಳ ಕಾಲ ಉಪವಾಸ ಸತ್ಯಾಗ್ರಹ ಕುಳಿತಿದ್ದರು. ಆಗ ಕಾರ್ಖಾನೆಯ ಆಡಳಿತ ಮಂಡಳಿಯವರಾಗಲಿ ಅಥವಾ ಇತರ ಸಂಬಂಧಪಟ್ಟವರಾಗಲಿ ಯಾರೂ ಅವರತ್ತ ಹೋಗಿ ಅವರ ಬಗ್ಗೆ ಕೇಳಲಿಲ್ಲ. ನಾನು ಅವರಿಂದ ಓಟನ್ನು ಪಡೆದಿರುವ ಆ ಕ್ಷೇತ್ರದ ಶಾಸಕನಾಗಿ ನಾನು ಅವರ

ಬಳಿ ಹೋಗಿ ಅವರ ಕಷ್ಟಗಳನ್ನು ಕೇಳುವುದು ನನ್ನ ಕರ್ತವ್ಯವಾಗಿರುತ್ತದೆ. ಆ ದೃಷ್ಟಿಯಿಂದ ನಾನು ಅಲ್ಲಿಗೆ ಒಳಗೆ ಹೋಗಿ ಕೇಳುವಂಥ ಸಂದರ್ಭದಲ್ಲಿ ಆ ಕಾರ್ಖಾನೆಯ ಆಡಳಿತ ನಡೆಸತಕ್ಕಂಥ ಸರ್ಕಾರ ನೇಮಕ ಮಾಡಿರುವ ಎಂ.ಡಿ. ಮತ್ತು ಅರಗ ಜ್ಞಾನೇಂದ್ರ ಎನ್ನುವ ಕಾರ್ಖಾನೆಯ ಛೇರ್ಮನ್‌ರವರು ನನಗೆ ಅವಮಾನ ಮಾಡಿ ಗೇಟ್ ಬೀಗ ಹಾಕಿ ನನ್ನನ್ನು ನಾಲ್ಕೂವರೆ ಗಂಟೆಗಳ ಕಾಲ ಹೊರಗಡೆ ನಿಲ್ಲಿಸಿದ್ದಾರೆ. ಇದರಿಂದ ನನಗೆ ಬಹಳ ಅವಮಾನವಾಗಿದೆ. ಈ ಬಗ್ಗೆ ಏನು ಕ್ರಮ ಜರುಗಿಸುತ್ತೀರಿ ಎನ್ನುವುದನ್ನು ಮಾನ್ಯ ಸಚಿವರು ಹೇಳಬೇಕು. ಚುನಾಯಿತ ಪ್ರತಿನಿಧಿಯಾಗಿ ನಾನು ಅಲ್ಲಿಗೆ ಹೋಗಿರುವುದು. ಆದರೆ ಅಲ್ಲಿ ನನಗೆ ಅವಮಾನವಾಗಿದೆ. ನನ್ನನ್ನು ಹೊರಗಡೆ ನಿಲ್ಲಿಸಿ ಗೇಟ್‌ಗೆ ಬೀಗ ಹಾಕುವುದಕ್ಕೆ ಅವರಿಗೆ ಅಧಿಕಾರ ಕೊಟ್ಟವರ್‍ಯಾರು?

ಅಧ್ಯಕ್ಷರು: ಕಾರ್ಖಾನೆಯ ಅಧ್ಯಕ್ಷರ ಹೆಸರನ್ನು ಇಲ್ಲಿ ಹೇಳಬೇಡಿ. ಅವರು ಈಗ ಈ ಮನೆಯ ಸದಸ್ಯರಾಗಿಲ್ಲ.

ಶ್ರೀ ಬಿ.ಕೆ. ಸಂಗಮೇಶ್ವರ್: ನಾನು ಸರ್ಕಾರದ ಒಂದು ಅಂಗ. ನಮ್ಮನ್ನು ಹೊರಗಡೆ ನಿಲ್ಲಿಸಿ ಗೇಟ್‌ಗೆ ಬೀಗ ಹಾಕುವುದಕ್ಕೆ ಯಾರು ಅವರಿಗೆ ಆ ರೀತಿಯ ಅಧಿಕಾರವನ್ನು ಕೊಟ್ಟವರು? ಅವರ ಮೇಲೆ ಈಗ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ?

ಶ್ರೀ ಮುರುಗೇಶ್ ಆರ್. ನಿರಾಣಿ: ಮಾನ್ಯ ಅಧ್ಯಕ್ಷರೆ, ಎಂ.ಪಿ.ಎಂ.ನ ಅಧ್ಯಕ್ಷರು ಈ ಸದನದ ಒಳಗಡೆ ಇಲ್ಲದೇ ಇರುವುದರಿಂದ ಯಾವುದೇ ರೀತಿಯಿಂದ ಅವರ ಹೆಸರನ್ನು ಪ್ರಸ್ತಾಪ ಮಾಡಬಾರದು.

ಅಧ್ಯಕ್ಷರು: ಈ ಮನೆಯ ಸದಸ್ಯರಾಗಿಲ್ಲದ ಎಂಪಿಎಂ ನ ಅಧ್ಯಕ್ಷರ ಹೆಸರನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶವಿಲ್ಲ.

(ಗೊಂದಲ)

ಶ್ರೀ ಬಿ.ಕೆ. ಸಂಗಮೇಶ್ವರ್: ಮಾನ್ಯ ಅಧ್ಯಕ್ಷರೆ, ನಾನು ಜನಗಳಿಂದ ಆಯ್ಕೆಯಾಗಿರುವ ಆ ಕ್ಷೇತ್ರದ ಪ್ರತಿನಿಧಿ. ಆ ಕಂಪನಿಗೆ ಸರ್ಕಾರ ನಾಮಿನೇಟ್ ಮಾಡಿರುವ ಅಧ್ಯಕ್ಷರು ಕಾರ್ಖಾನೆಯ ಎಂ.ಡಿ.ಯವರಿಗೆ ಆದೇಶ ಕೊಟ್ಟು ಎಂ.ಎಲ್.ಎ. ರವರನ್ನು ಒಳಗಡೆ ಬಿಡಬೇಡ ಎಂದು ಆದೇಶ ಕೊಡುತ್ತಾರೆ. ಕಾರ್ಖಾನೆಯ ಕಾರ್ಮಿಕರ ಕಷ್ಟಸುಖ ಕೇಳುವುದಕ್ಕೆ ಯಾರು ಬರುತ್ತಾರೆ? ಇವರು ಬರುತ್ತಾರೆಯೆ? ನಾವು ಕಾರ್ಮಿಕರ ಕಷ್ಟಸುಖ ಕೇಳಿದ್ದೇ ತಪ್ಪೇ? ಸರ್ಕಾರದವರು ನೂರು ಕೋಟಿ ಕೊಟ್ಟಿದ್ದೇವೆ, ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ಹಿಂದೆ ಕಾಂಗ್ರೆಸ್ ಸರ್ಕಾರವಿದ್ದಾಗ 170 ಕೋಟಿ ಸಹಾಯಧನವನ್ನು ಕೊಟ್ಟಿದೆ.

2001 ರಲ್ಲಿ 40 ಕೋಟಿ 23 ಲಕ್ಷ ಕೊಟ್ಟಿದೆ. 2001–02 ರಲ್ಲಿ 17 ಕೋಟಿ 57 ಲಕ್ಷ ರೂ.ಗಳನ್ನು ಕೊಟ್ಟಿದೆ. 2002–03 ರಲ್ಲಿ 5 ಕೋಟಿ 15 ಲಕ್ಷ ರೂ.ಗಳನ್ನು ಕೊಟ್ಟಿದೆ. 2003–04 ರಲ್ಲಿ 28 ಕೋಟಿ ರೂ.ಗಳನ್ನು ಕೊಟ್ಟಿದೆ. 2004–05 ರಲ್ಲಿ 38 ಕೋಟಿ 60 ಲಕ್ಷ ರೂ.ಗಳನ್ನು ಕೊಟ್ಟಿದೆ. 2005–06 ರಲ್ಲಿ 26 ಕೋಟಿ 75 ಲಕ್ಷ ರೂ.ಗಳನ್ನು ಕೊಟ್ಟಿದೆ. ಹೀಗೆ ಒಟ್ಟು 170 ಕೋಟಿ ರೂ.ಗಳ ಸಹಾಯಧನವನ್ನು ಸರ್ಕಾರದಿಂದ ಕೊಟ್ಟಿದೆ. ಆದರೆ ನೀವು 2008–09 ರಲ್ಲಿ ಏನೂ ಕೊಟ್ಟಿಲ್ಲ. 2009–10 ರಲ್ಲಿ ಏನೂ ಕೊಟ್ಟಿಲ್ಲ. ಕೇವಲ ಸುಮ್ನೆ ಕೊಡುತ್ತೇವೆ, ಕೊಡುತ್ತೇವೆ ಎನ್ನುವ ಆಶ್ವಾಸನೆಯನ್ನು ಕೊಟ್ಟು ಮೊನ್ನೆ 100 ಕೋಟಿ ಕೊಟ್ಟಿದ್ದೇವೆಂದು ಹೇಳುತ್ತಾರೆ. ಬ್ಯಾಂಕ್ ಗ್ಯಾರಂಟಿ ಮೇಲೆ 50 ಕೋಟಿ ರೂ.ಗಳನ್ನೇನೋ ತೆಗೆದುಕೊಂಡಿದ್ದಾರೆ. ಏನು ಮಾಡುತ್ತಾರೋ ನೂರು ಕೋಟಿ ಕೊಡುವುದಕ್ಕೆ ನನಗಂತೂ ಗೊತ್ತಾಗುತ್ತಿಲ್ಲ. ನನ್ನ ಒತ್ತಾಯವಿಷ್ಟೆ, ನನಗೆ ಅವಮಾನ ಮಾಡಿರತಕ್ಕಂಥ ಅಧಿಕಾರಿ ಮತ್ತು ಯಾರು ಆಡಳಿತ ಮಂಡಳಿಯ ಛೇರ್ಮನ್‌ರಾಗಿದ್ದಾರೋ ಅವರ ಮೇಲೆ ಕಾನೂನು ರೀತಿ ಕ್ರಮ ಜರುಗಿಸಬೇಕು. ನಮ್ಮ ಕಾರ್ಮಿಕರ ಬೇಡಿಕೆಯಾದ 8 ತಿಂಗಳ ತುಟ್ಟಿಭತ್ಯೆಯನ್ನು ಕೊಡಬೇಕು. ಕಾರ್ಮಿಕರು ಜೀವನ ನಡೆಸುವುದು ತುಂಬಾ ಕಷ್ಟವಾಗಿದೆ. ಇವತ್ತಿನ ಹೆಚ್ಚುತ್ತಿರುವ ಬೆಲೆಗಳನ್ನು ನೋಡಿದರೆ ಅವರಿಗೇನು 5 ಸಾವಿರ, 8 ಸಾವಿರ ಸಂಬಳ ಬರುತ್ತದೆಯೋ ಅದರಲ್ಲಿ ಜೀವನ ಹೇಗೆ ಮಾಡುತ್ತಾರೆ?

ಅಧ್ಯಕ್ಷರು: ನೀವು ಗಮನ ಸೆಳೆಯುವುದರಲ್ಲಿ ಈ ರೀತಿ ಭಾಷಣ ಮಾಡುತ್ತಾ ಹೋದರೆ ನಾನು ನಿಮ್ಮ ಮಾತುಗಳನ್ನು ಕಟ್ ಮಾಡಬೇಕಾಗುತ್ತದಷ್ಟೆ. ನೀವು ಬೇಕಾದರೆ ಈ ವಿಷಯ ಪ್ರಸ್ತಾಪನೆಗೆ ಅವಕಾಶ ಕೋರಲು ಬೇರೆ ರೂಪದಲ್ಲಿ ಚರ್ಚೆಗೆ ತನ್ನಿ.

ಶ್ರೀ ಬಿ.ಕೆ. ಸಂಗಮೇಶ್ವರ್: ಇದು ಕಾರ್ಮಿಕರ ವಿಚಾರ.

ಅಧ್ಯಕ್ಷರು: ಇರಬಹುದು. ಆದರೆ ಗಮನ ಸೆಳೆಯುವ ಸೂಚನೆಯಲ್ಲಿ ನೀವು ಈ ರೀತಿ ಭಾಷಣ ಮಾಡುತ್ತಾ ಹೋದರೆ ಅದಕ್ಕೆ ನಾನು ಅವಕಾಶವನ್ನು ಕೊಡುವುದಿಲ್ಲ.

ಶ್ರೀ ಬಿ.ಕೆ. ಸಂಗಮೇಶ್ವರ್: ಕಾನೂನು ಚೌಕಟ್ಟಿನಲ್ಲಿ ಅವಕಾಶವಿದೆ.

ಅಧ್ಯಕ್ಷರು: ಇಲ್ಲ. ಈ ರೀತಿ ಭಾಷಣ ಮಾಡುವುದಕ್ಕೆ ಅವಕಾಶವಿಲ್ಲ.

ಶ್ರೀ ಬಿ.ಕೆ. ಸಂಗಮೇಶ್ವರ್: ಲೇಬರ್ ಕಮಿಷನರ್‌ರವರು ಆದೇಶ ಮಾಡಿದ್ದರೂ ಕೂಡ ಕಳೆದ 8 ತಿಂಗಳಿಂದ ಏಕೆ ಕಾರ್ಮಿಕರಿಗೆ ತುಟ್ಟಿಭತ್ಯೆಯನ್ನು ಕೊಟ್ಟಿಲ್ಲ?

ಅಧ್ಯಕ್ಷರು: ಅಷ್ಟನ್ನು ಹೇಳುವುದಕ್ಕೆ ನಾನು ತಮಗೆ ಅವಕಾಶವನ್ನು ಕೊಟ್ಟಿದ್ದೇನೆ. ಆದರೆ ತಾವು ಹೇಳಿದ್ದನ್ನೇ ಮತ್ತೆ ಮತ್ತೆ ಹೇಳಿದರೆ ಹೇಗೆ?

ಶ್ರೀ ಬಿ.ಕೆ. ಸಂಗಮೇಶ್ವರ್: ಈಗ ಆಗಿರುವ ಅವಮಾನಕ್ಕೆ ಏನು ಮಾಡುತ್ತೀರೆಂದು ತಾವು ಹೇಳಬೇಕು ಅಧ್ಯಕ್ಷರೆ.

ಅಧ್ಯಕ್ಷರು: ಆಯಿತು.

ಶ್ರೀ ಬಿ.ಕೆ. ಸಂಗಮೇಶ್ವರ್: ಆಯಿತು ಅಂದರೆ ಏನು?

ಅಧ್ಯಕ್ಷರು: ಮಾನ್ಯ ಸಚಿವರು ಉತ್ತರ ಕೊಡುತ್ತಾರೆ ಇರಿ. ಗಮನ ಸೆಳೆಯುವ ಸೂಚನೆಯಲ್ಲಿ ನೀವು ಸವಿಸ್ತಾರವಾಗಿ ಹೇಳುತ್ತಾ ಹೋದರೆ ಹೇಗೆ?

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ನನಗೂ ಕೂಡ ಕಾರ್ಖಾನೆಯಿಂದ ಎಂ.ಎಲ್.ಎ.ರವರಾದ ಮಾನ್ಯ ಸಂಗಮೇಶ್ವರ್‌ರವರು ಫೋನ್ ಮಾಡಿದ್ದರು. ನಾನು ಅವತ್ತು ಬೆಂಗಳೂರಿನಲ್ಲಿಯೇ ಇದ್ದೆ. ಅಂದೇ ಕಾರ್ಖಾನೆಯ ಎಂ.ಡಿ.ಯವರಿಗೆ ಫೋನ್ ಮಾಡಿದೆ. ಆಗ ಎಂ.ಡಿ. ಫೋನ್‌ಗೆ ಸಿಗಲಿಲ್ಲ. ಮಾನ್ಯ ಮಂತ್ರಿಗಳೆ, ನೀವೂ ಕೂಡ ಶಾಸಕರಾಗಿಯೇ ನಂತರ ಮಂತ್ರಿಗಳಾಗಿರುವುದು. ಮಾನ್ಯ ಅಧ್ಯಕ್ಷರೆ, ನೀವು ನಮ್ಮ ರಕ್ಷಣೆಗೆ ಬರಬೇಕಾಗುತ್ತದೆ. ಎಂ.ಎಲ್.ಎ. ಕಾರ್ಖಾನೆಗೆ ಹೋದರೆ ಕಾರ್ಖಾನೆಯ ಎಂ.ಡಿ. ಬಾಗಿಲು ಹಾಕಿಕೊಂಡು ಅಲ್ಲಿ ಪೋಲೀಸ್‌ರವರನ್ನು ನಿಲ್ಲಿಸಿದ್ದಾರೆ. ಕಾರ್ಮಿಕರ ಪರವಾಗಿ ಮಾತನಾಡಲು ಹೋದ ಎಂ.ಎಲ್.ಎ.ರವರಿಗೆ ಕಾರ್ಖಾನೆಯ ಎಂ.ಡಿ. ಒಳಗಡೆ ಬಿಟ್ಟಿಲ್ಲ. ಅವರೇನು ಸರ್ಕಾರವೋ ಅಥವಾ ಯಾರಿವರು? ಎಂ.ಎಲ್.ಎ. ಗೆ ಒಳಗಡೆ ಬಿಡದೇ ಗೇಟ್‌ಗೆ ಬೀಗ ಹಾಕಿಸಿದ್ದಾರೆ. ಅವರ್ಯಾರೋ ಹೇಳಿದರೆಂದು ಹೇಳಿ, ಅವರು ಹೇಳಿದರೋ ಬಿಟ್ಟರೋ ನನಗೆ ಗೊತ್ತಿಲ್ಲ. ಎಂ.ಡಿ.ಯಾದವರು ಸರ್ಕಾರಿ ನೌಕರರು. ಅವರ ಇತಿಮಿತಿಗಳೇನು ಎಂದು ಅವರಿಗೆ ಗೊತ್ತಿರಬೇಕಲ್ಲವೆ? ಕಾರ್ಖಾನೆಗೆ ಬಂದಿದ್ದವರು ಬೇರೆ ಯಾರೋ ಅಲ್ಲ. ಆ ಕ್ಷೇತ್ರದ ಎಂ.ಎಲ್.ಎ. He is the representative of Bhadravathi Constituency. ಅವರು ಭದ್ರಾವತಿ ಕ್ಷೇತ್ರದ ಎಂ.ಎಲ್.ಎ.ಆಗಿದ್ದಾರೆ. ಆ ಕ್ಷೇತ್ರದ ಎಂ.ಎಲ್.ಎ. ರವರಿಗೇ ಕಾರ್ಖಾನೆಯ ಒಳಗಡೆ ಬಿಡದಿದ್ದರೆ ಬೇರೆ ಜನರ ಪಾಡೇನು? ಕಾರ್ಮಿಕರ ಪಾಡೇನು? ನೀವು ಅವರಿಗೆ ರಕ್ಷಣೆ ಕೊಡಕೂಡದು. ಎಂಎಲ್‌ಎರವರನ್ನು ಒಳಗಡೆ ಬಿಡದಿರುವುದರಿಂದ this is a breach of privilege. ಎಂ.ಎಲ್.ಎ. ಹಕ್ಕಿಗೆ ಚ್ಯುತಿಯಾಗುತ್ತದೆ. ಆ ಕಾರ್ಖಾನೆಯಲ್ಲಿ 4

ಸಾವಿರ ನೌಕರರು ಇದ್ದಾರೆ. ಕಳೆದ 6 ತಿಂಗಳಿಂದ ಅವರಿಗೆ ಸಂಬಳವಿಲ್ಲ. 16 ದಿನಗಳ ಕಾಲ ಚಳುವಳಿ ಮಾಡುತ್ತಾ ಉಪವಾಸ ಸತ್ಯಾಗ್ರಹ ಮಾಡಿದ್ದಾರೆ. ಅವರಿಗೆ ಸಂಬಳವನ್ನೂ ಕೂಡ ಕೊಟ್ಟಿಲ್ಲ ಮತ್ತು ಅವರಿಗೆ ಕೊಡಬೇಕಾದ ತುಟ್ಟಿಭತ್ಯೆಯನ್ನೂ ಕೊಟ್ಟಿಲ್ಲ. ಕಳೆದ ಎರಡು ವರ್ಷಗಳಿಂದ ಈಗ ಇಲ್ಲಿ ಇವರೇ ಕೊಟ್ಟಿರತಕ್ಕಂಥ ಅಂಕಿ ಅಂಶದ ಪ್ರಕಾರ ಹಿಂದಿನ ವರ್ಷಗಳಲ್ಲಿ ಸಬ್ಸಿಡಿಯನ್ನು ಕೊಡಲಾಗಿದೆ. 2008–09 ಮತ್ತು 2009–10 ರಲ್ಲಿ ನೀವು ಒಂದು ರೂಪಾಯಿಯ ಸಬ್ಸಿಡಿಯನ್ನೂ ಕೂಡ ಕೊಟ್ಟಿಲ್ಲ. ಈ ವರ್ಷ ಹೇಳಿದ್ದೀರಿ, 50 ಕೋಟಿ ರೂ.ಗಳನ್ನು ಸಾಲ ತೆಗೆದುಕೊಳ್ಳಲು ನಾವು ಗ್ಯಾರಂಟಿ ಕೊಡುತ್ತೇವೆ, ನೀವು ಸಾಲ ತೆಗೆದುಕೊಳ್ಳಿ ಎಂದು ಕಾರ್ಖಾನೆಯವರಿಗೆ ಹೇಳಿದ್ದೀರಿ. ಇನ್ನು 30 ಕೋಟಿ ರೂ.ಗಳನ್ನು ಏತಕ್ಕೋ ಕೊಡುತ್ತೇವೆಂದು ಹೇಳಿದ್ದೀರಿ. ಇನ್ನು 50 ಕೋಟಿ ರೂ.ಗಳನ್ನು ಬಾಂಡ್‌ಗಳ ಮೂಲಕ ಸಾಲ ಎತ್ತಿ ಕೊಡುತ್ತೇವೆ ಎಂದು ಹೇಳಿದ್ದೀರಿ. ಎರಡು ವರ್ಷ ಅವರಿಗೆ ನೀವು ಸಬ್ಸಿಡಿಯನ್ನೂ ಕೊಡದೆ ಕಾರ್ಖಾನೆ ನಷ್ಟದಲ್ಲಿ ಮುಳುಗಿ ಹೋಗಿರುವಾಗ ನೌಕರರಿಗೆ ಸಂಬಳ ಎಲ್ಲಿಂದ ಕೊಡುತ್ತಾರೆ? ಒಂದು ಕಡೆ ನೀವು ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ ಎಂದು ಮಾಡುತ್ತೀರಿ. ಇನ್ನೊಂದು ಕಡೆ ಸರ್.ಎಂ. ವಿಶ್ವೇಶ್ವರಯ್ಯನವರು ಪ್ರಾರಂಭ ಮಾಡಿದ ಸರ್ಕಾರದ ಒಂದು ಪ್ರತಿಷ್ಠಿತ ಕಾರ್ಖಾನೆಯ ಬಗ್ಗೆ ಈ ರೀತಿ ತಾತ್ಸಾರ ಮಾಡಿದರೆ ಹೇಗೆ?

ಶ್ರೀ ಮುರುಗೇಶ್ ಆರ್. ನಿರಾಣಿ: ಮಾನ್ಯ ಅಧ್ಯಕ್ಷರೆ, ಅಲ್ಲಿ ಏನಾಗಿದೆಯೆಂದರೆ, , , ,

ಶ್ರೀ ಸಿದ್ದರಾಮಯ್ಯ: ಮಾನ್ಯ ಸಚಿವರೆ, ನೀವು ಆಮೇಲೆ ಉತ್ತರ ಹೇಳುವಿರಂತೆ. ನಾನು ಮಾತನಾಡಿ ಮುಗಿಸುತ್ತೇನೆ. ಆಮೇಲೆ ಉತ್ತರ ಕೊಡುವಿರಂತೆ. ಏಕೆ ನೀವು ಹೀಗೆ ತಾಳ್ಮೆ ಕಳೆದುಕೊಳ್ಳುತ್ತೀರಿ. ಈ ರೀತಿಯಾದರೆ ಹೇಗೆ?

ಅಧ್ಯಕ್ಷರು: ವಿರೋಧ ಪಕ್ಷದ ನಾಯಕರು ಮಾತನಾಡಿದ ಮೇಲೆ ನೀವು ಉತ್ತರ ಕೊಡಿ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಇಲ್ಲಿ ಪ್ರಶ್ನೆ ಇರತಕ್ಕಂಥದ್ದು, ಮೊದಲನೆಯದಾಗಿ ಸಬ್ಸಿಡಿಯನ್ನು ಕೊಟ್ಟಿಲ್ಲ. ಆ ಕಾರ್ಖಾನೆ ನಷ್ಟದಲ್ಲಿ ನಡೆಯುತ್ತಿದೆ. ಕಾರ್ಮಿಕರು ಬೀದಿಗೆ ಬಂದಿದ್ದಾರೆ. ಇನ್ನು ಎರಡನೆಯದಾಗಿ, ಅಲ್ಲಿಯ ಕಾರ್ಮಿಕರು ನಮ್ಮ ಪರವಾಗಿ ಆಡಳಿತ ಮಂಡಳಿಯವರಿಗೆ ಸ್ವಲ್ಪ ಹೇಳಿ ಎಂದು ಆ ಕ್ಷೇತ್ರದ ಶಾಸಕರಾದ ಮಾನ್ಯ ಸಂಗಮೇಶ್ವರ್‌ರವರನ್ನು ಅಲ್ಲಿಗೆ

ಕರೆದುಕೊಂಡು ಹೋದರೆ ಕಾರ್ಖಾನೆಯ ಎಂ.ಡಿ.ಯವರು ಕಾರ್ಖಾನೆಯ ಗೇಟ್ ಹಾಕಿಸಿ ಬೀಗ ಹಾಕಿಸಿ ಇವರನ್ನು ಒಳಗಡೆಯೇ ಬಿಡದೇ ಇರುವ ಹಾಗೆ ಮಾಡಿದ್ದಾರೆ. ಮಾನ್ಯ ಸಚಿವರೆ, ನಿಮಗೇ ಆ ರೀತಿ ಮಾಡಿದರೆ?

ಶ್ರೀ ಮುರುಗೇಶ್ ಆರ್. ನಿರಾಣಿ: ಅದಕ್ಕೆ ನಾನು ಉತ್ತರ ಹೇಳುತ್ತೇನೆ. ಉತ್ತರ ಹೇಳುವುದಲ್ಲ. ಅವರ ಮೇಲೆ ಕ್ರಮ ತೆಗೆದುಕೊಳ್ಳಿ. It is too much. ಸರ್ಕಾರಿ ನೌಕರರು ಶಾಸಕರಿಗೆ ಇದೇ ರೀತಿಯೇ treat ಮಾಡುವುದು? ಶಾಸಕರು, ಚುನಾಯಿತ ಪ್ರತಿನಿಧಿಗಳು ಹೋದರೆ ಯಾವ ರೀತಿ behave ಮಾಡಬೇಕು, ಯಾವ ರೀತಿ treat ಮಾಡಬೇಕೆಂದು ನಾವು ಒಂದು circular ಹೊರಡಿಸಿದ್ದೇವೆ. Is it not violation of it? ನೀವು ಕೂಡ ಎಂಎಲ್ಎ ಆಗಿ ಮಂತ್ರಿಯಾಗಿರುವುದು. ನಾಳೆ ನಿಮಗೆ ಇದೇ ಗತಿಯಾದರೇ ಅಥವಾ ಬೇರೆ ಎಂಎಲ್ಎ ಗಳಿಗೆ ಆದರೆ ಹೇಗೆ? ಪ್ರಜಾತಂತ್ರ ವ್ಯವಸ್ಥೆಯಲ್ಲಿ ಅಧಿಕಾರಿಗಳು ಮತ್ತು ಚುನಾಯಿತ ಪ್ರತಿನಿಧಿಗಳ ಸಂಬಂಧಗಳು ಏನು, ಅವರು ಹೇಗೆ behave ಮಾಡಬೇಕು ಎಂದು ನಾವು ಪದೇ ಪದೇ circular ಹೊರಡಿಸಿದ್ದೇವೆ. He must know his limits. ಅಲ್ಲಿ ಬೀಗ ಹಾಕಿ ಎಂಎಲ್ಎ ಹೋದರೆ ಅವರನ್ನು ಒಳಗಡೆ ಬಿಡಬೇಡಿ ಎಂದರೆ ಏನರ್ಥ? This is too much, please take action against him.

ಶ್ರೀ ಡಿ. ಎನ್. ಜೀವರಾಜ್: ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಸದಸ್ಯರಾದ ಸಂಗಮೇಶ್ವರ್‌ರವರ ಪಕ್ಕದ ಕ್ಷೇತ್ರದವನು. ನಾನು ಉತ್ತರ ಹೇಳುತ್ತಿಲ್ಲ. ಮಾನ್ಯ ಸಂಗಮೇಶ್ವರ್‌ರವರೇ ತಪ್ಪು ತಿಳಿಯಬೇಡಿ. ನಾನು ಏನು ಹೇಳುವುದಕ್ಕೆ ಹೊರಟಿದ್ದೆ ಎಂದರೆ MPM ಈ ರಾಜ್ಯದ ಒಂದು ಪ್ರತಿಷ್ಠಿತ ಸಂಸ್ಥೆ. ಅದು ಹಾಳಾಗುತ್ತಿರುವುದರಿಂದ ಅಲ್ಲಿರುವಂತಹ ರೈತರು ರಸ್ತೆಗೆ ಬರುತ್ತಿದ್ದಾರೆ. ಅಲ್ಲಿರುವಂತಹ ರೈತರಿಗೆ ಕಬ್ಬನ್ನು ಎಲ್ಲಿಗೆ ಮಾರಬೇಕು ಎನ್ನುವುದು ಮಾರ್ಗದರ್ಶನ ಇಲ್ಲ. ಅಲ್ಲಿರುವಂತಹ ರೈತರು ಈಗ ಕಬ್ಬನ್ನು ಬೆಳೆಸದೆ ಅಡಿಕೆ ಗಿಡಗಳನ್ನು ಬೆಳೆಯುವುದಕ್ಕೆ ಹೊರಟಿದ್ದಾರೆ. ಈಗ ಅಡಿಕೆ ಸ್ಥಿತಿಯೂ ಸಂಕಷ್ಟದಲ್ಲಿದೆ. ನನ್ನ ಅಭಿಪ್ರಾಯ ಇಷ್ಟೇ, ಮಾನ್ಯ ಸಭಾಧ್ಯಕ್ಷರೆ, ನಾನು ತಮ್ಮ ಮೂಲಕ ಅಲ್ಲಿರುವಂತಹಗೆ ಹೇಳುತ್ತೇನೆ ಮಾನ್ಯ ಸಂಗಮೇಶ್ವರ್‌ರವರು ತಪ್ಪಾಗಿ ಭಾವಿಸಬಾರದು. ಅಲ್ಲಿ factory ಹಾಳಾಗುವುದಕ್ಕೆ ಪ್ರಮುಖ ಕಾರಣ ಅಲ್ಲಿರುವವರು ಕೆಲಸವನ್ನು ಸರಿಯಾಗಿ ಮಾಡಬೇಕು. ಅಲ್ಲಿ ಸರಿಯಾಗಿ ಕೆಲಸ ಮಾಡದೇ ಶಾಸಕರನ್ನು ಒಳಗಡೆ ಬರಬೇಡಿ ಎಂದು

ಹೇಳಿಲ್ಲವೆನ್ನುವುದು ನನಗೆ ಇರುವ ಮಾಹಿತಿ. ಅಲ್ಲಿ ಶಾಸಕರನ್ನು ಒಳಗಡೆ ಕರೆದಿದ್ದಾರೆ. ಆದರೆ ಶಾಸಕರು ಏನು ಹೇಳಿದ್ದಾರೆಂದರೆ ನಾನೊಬ್ಬನೆ ಬರುವುದಿಲ್ಲ, ಇವರೆಲ್ಲರೂ ಒಳಗಡೆ ಬರಬೇಕು ಎಂದು, ಜೊತೆಯಲ್ಲಿರುವ 50 ಜನರನ್ನು ಒಳಗಡೆ ಕರೆದುಕೊಂಡು ಹೋಗುವುದಕ್ಕೆ ಆಗದಿರುವಂತಹ ಮಧ್ಯದಲ್ಲಿ ಈ ಗಲಾಟೆಯಾಗಿದೆ. ಮಾನ್ಯ ಸಂಗಮೇಶ್ವರ್‌ರವರು ನಮಗೆ ಒಳ್ಳೆಯ ಸ್ನೇಹಿತರು. ಆದರೆ ಆ ಫ್ಯಾಕ್ಟರಿ ಉಳಿಯುವ ಕಡೆ ಕೂಡ ಅವರು ಗಮನವನ್ನು ಹರಿಸಲಿ.

ಶ್ರೀ ಸಿದ್ಧರಾಮಯ್ಯ: ಜೀವರಾಜ್‌ರವರೇ, ನೀವು ಅಲ್ಲಿ ಇದ್ದಿರಾ?

ಶ್ರೀ ಡಿ. ಎನ್. ಜೀವರಾಜ್: ನನ್ನ ಪಕ್ಕದ ಕ್ಷೇತ್ರ. . .

SRI. SIDDARAMAIAH: No no please don't go by the words of the officer.

ಶ್ರೀ ಬಿ.ಕೆ. ಸಂಗಮೇಶ್ವರ್: ನಾನು ಒಬ್ಬನೇ ಹೋಗಿದ್ದು. ನನ್ನ ಜೊತೆ ಯಾರೂ ಇರಲಿಲ್ಲ. ಕಬ್ಬನ್ನು ಸರಬರಾಜು ಮಾಡಬೇಕೆಂದಾಗ ನಿಜವಾಗಲೂ ರೈತರು ಫ್ಯಾಕ್ಟರಿಗೆ ಕಬ್ಬು ಹೊಡೆಯುತ್ತಾರೆ. ಕಬ್ಬು ಹೊಡೆದ ತಕ್ಷಣ ಅರ್ಧ ಪೇಮೆಂಟ್ ಅವತ್ತೇ ಕೊಡುತ್ತೇವೆ, ಇನ್ನು ಹದಿನೈದು ದಿವಸದಲ್ಲಿ ಕೊಡುತ್ತೇವೆಂದು ಹೇಳಿದರು. ಆದರೆ ಮೂರು ತಿಂಗಳಾದರೂ ರೈತರಿಗೆ ಕಬ್ಬಿನ ಹಣವನ್ನು ಕೊಟ್ಟಿಲ್ಲ. ಇನ್ನು ಯಾರು ಇವರಿಗೆ ಕಬ್ಬು ಹೊಡೆಯುತ್ತಾರೆ. ಮೂರು–ಮೂರು ತಿಂಗಳಾದರೂ ಇನ್ನು ಬಿಲ್ ಪೆಂಡಿಂಗ್ ಇದೆ.

ಶ್ರೀ ಕಿಮ್ಮನೆ ರತ್ನಾಕರ್: ಮಾನ್ಯ ಅಧ್ಯಕ್ಷರೇ, ಮಾನ್ಯ ಸಂಗಮೇಶ್ವರ್‌ರವರು ಯಾವ ವಿಚಾರವಾಗಿ ಗಮನವನ್ನು ಸೆಳೆದರು, ಆ ಘಟನೆಯ ಸ್ಥಳಕ್ಕೆ ನಾನೂ ಕೂಡ ಹೋಗಿದ್ದೆನು. ಅಲ್ಲಿರುವಂತಹ ವಾಸ್ತವ ಸ್ಥಿತಿಯನ್ನು ಮಾನ್ಯ ಸಚಿವರು ಪೂರ್ಣವಾಗಿ ಗ್ರಹಿಸಿದರೋ ಇಲ್ಲವೋ ಗೊತ್ತಿಲ್ಲ. ಇತ್ತೀಚೆಗೆ ಎಂದರೆ, 2008ರ ನಂತರ ಅಲ್ಲಿ ಆಡಳಿತ ಏನಿದೆ, ಅಲ್ಲಿ ನೌಕರರಿಂದ ನಷ್ಟವಾಗಿಲ್ಲ, ಅದು ಆಡಳಿತದ ನಿರ್ವಹಣೆಯಿಂದ ಆಗಿರುವಂತಹ ನಷ್ಟ. ಇದನ್ನು ಮಾನ್ಯ ಸಚಿವರು ಅರ್ಥ ಮಾಡಿಕೊಳ್ಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ವಾಸ್ತವವಾಗಿ ಅಲ್ಲಿ ಸಕ್ಕರೆಯನ್ನು high rate ಬಂದಾಗ sale ಮಾಡದೇ ಒಳಗಡೆ ಇಟ್ಟುಕೊಂಡಿದ್ದಾರೆ. ಅದು ಆಡಳಿತದ ನ್ಯೂನ್ಯತೆಯಿಂದ ಸುಮಾರು 30 ರಿಂದ 40 ಲಕ್ಷ ರೂಪಾಯಿ ನಷ್ಟವಾಗಿದೆ. ಅದರ ಬಗ್ಗೆ ಮಾನ್ಯ ಮಂತ್ರಿಗಳು ಹೇಳಲಿಲ್ಲ. ಅದೇ ರೀತಿ ಪೇಪರ್ ಏನು ತಯಾರು ಮಾಡುತ್ತಾರೆ, ಅದಕ್ಕೆ ಬೇಕಾಗಿರುವಂತಹ ಒಂದು ಲೋಸಿನ್

ಎನ್ನುವುದನ್ನು ಸಮಯಕ್ಕೆ ಸರಿಯಾಗಿ ತರಿಸಲಿಲ್ಲ. ಸಮಯಕ್ಕೆ ಸರಿಯಾಗಿ ತರಿಸದಿರುವುದರಿಂದ ಕೋಟ್ಯಾಂತರ ರೂಪಾಯಿ ನಷ್ಟವಾಗಿದೆ. ಈ ರೀತಿಯಾದಂತಹ ಅನೇಕ ವಿಚಾರಗಳನ್ನು ಅವರು ಹೇಳಲಿಲ್ಲ. Actually, C.F boiler ಎನ್ನುವ ಒಂದು reflectory cement ತರಿಸಬೇಕಾಗಿತ್ತು, ಇವರು ಅದನ್ನು ತರಿಸಲಿಲ್ಲ. ಅದನ್ನು ತರಿಸದಿರುವುದರಿಂದ ವಿದ್ಯುಚ್ಛಕ್ತಿ ಕೊರತೆ ಉಂಟಾಗಿದೆ. ವಿದ್ಯುಚ್ಛಕ್ತಿ ಕೊರತೆ ಉಂಟಾಗಿದ್ದರಿಂದ ಇವರು ಕೆಇಬಿಯಿಂದ ಇಂಧನವನ್ನು purchase ಮಾಡಿದ್ದಾರೆ. ಅದರ productivity ಆ ಕಾರ್ಖಾನೆಯಲ್ಲಿ ಇದೆ. ಅದಕ್ಕೆ ಬೇಕಾಗಿರುವಂತಹ reflector cement ಅನ್ನು ತರಿಸದಿರುವುದರಿಂದ, 3.5ಗೆ production ಆಗುವಂತಹ electricity stop ಮಾಡಿ, ಎಂಟು ದಿವಸದಲ್ಲಿ ಅದನ್ನು ತರಿಸಿದ್ದರೆ ಸರಿ ಹೋಗುತ್ತಿತ್ತು. They have purchased the electricity from the K.E.B at the rate of Rs.5.75. ಇದರಿಂದ ಕೋಟ್ಯಾಂತರ ರೂಪಾಯಿ ನಷ್ಟ ಅನುಭವಿಸಿದೆ. ಈ ರೀತಿಯಾಗಿ mal–administration and mis–administration by the management. It is not mistake on the part of the employees. ನೀವು ಕೈಗಾರಿಕೆ ಸಚಿವರಿದ್ದೀರಿ. ತುಟ್ಟಿಭತ್ಯೆಯನ್ನು ತಡೆಹಿಡಿಯತಕ್ಕಂಥಾದ್ದು, it is an illegal act. It is contempt. The Government is not having right to curtail the legitimate right of the labour. ನೀವು ತುಟ್ಟಿಭತ್ಯೆಯನ್ನು curtail ಮಾಡುವುದು ಎಲ್ಲಿದೆ? Where is the law? Is there any example in Karnataka or anywhere? ತುಟ್ಟಿಭತ್ಯೆಯನ್ನು ಇಲ್ಲಿಯವರೆಗೆ ತಡೆಹಿಡಿದಿರುವುದು ಎಲ್ಲಿಯೂ ಉದಾಹರಣೆ ಇಲ್ಲ. It is contempt. It is illegal. ನೀವು ತುಟ್ಟಿಭತ್ಯೆಯನ್ನು ತಡೆಹಿಡಿದು, ನೌಕರರಿಗೆ ಅರ್ಧ ಹೊಟ್ಟೆ ಮಾಡಿಬಿಟ್ಟು ಕೆಲಸ ಮಾಡಿ ಎಂದು ಹೇಳುವುದರಲ್ಲಿ ಏನಾದರೂ ಅರ್ಥವಿದೆಯೇ? ನಾನು ಒಂದು ವಿಚಾರ ಹೇಳುತ್ತೇನೆ. ಮಾನ್ಯ ಸಚಿವರಲ್ಲಿ ಒಂದು ವಿನಂತಿ ಮಾಡುತ್ತೇನೆ, whether you have called the meeting of the organization and tackled the matter? You have not called. 1,200 ಇರುವಂತಹ ಕಾರ್ಮಿಕರ ಸಂಘ ಏನಿದೆ, ಇವರು ಅವರನ್ನು ಕರೆಸಿ ಮಾತನಾಡಲಿಲ್ಲ. ನಾನು ಆ ಸ್ಥಳಕ್ಕೆ ಹೋಗಿದ್ದೇನೆ. ನಾನು ಮಾನ್ಯ ಸಚಿವರಲ್ಲಿ ಒಂದು ವಿಚಾರ ವಿನಂತಿ ಮಾಡಿಕೊಳ್ಳುವುದೇನೆಂದರೆ

ಮೊದಲನೆಯದಾಗಿ ಅವರಿಗೆ ತಕ್ಷಣ ತುಟ್ಟಿಭತ್ಯೆಯನ್ನು ಕೊಡುವಂತಹ ಕೆಲಸವನ್ನು ಮಾಡಬೇಕು. ಅಲ್ಲಿ M.Dಯವರು ಏನಿದ್ದಾರೆ, today you have to take action against him, otherwise we will move privilege against him. Because there should be a lesson for him. ಅಲ್ಲಿ ಇವರು ಆರನೇ ಎಂ.ಡಿಯಾಗಿ ಬಂದಿರುವುದು. ನಿಮ್ಮ ಅಧಿಕಾರಾವಧಿಯಲ್ಲಿ 2008 ರಿಂದ ಇಲ್ಲಿಯವರೆಗೆ ಎಂಟು ಜನ ಎಂ.ಡಿ ಯಾಗಿದ್ದಾರೆ. ಹಾಗಿದ್ದಾಗ ಅಲ್ಲಿ ಏನು ಆಡಳಿತ ಮಾಡುವುದಕ್ಕೆ ಆಗುತ್ತದೆ? ಇವರು ಬಂದು ಇನ್ನು ಎಂಟು ದಿವಸವಾಗಿಲ್ಲ. ನಾನು ಏನು ಹೇಳುತ್ತಿದ್ದೇನೆಂದರೆ ಇವರು ಸಮಸ್ಯೆಯನ್ನು ಅರ್ಥ ಮಾಡಿಕೊಳ್ಳಲಿಲ್ಲ. ಅಲ್ಲಿ ಆದಾಯ ಕಡಿಮೆಯಾಗುತ್ತಿದೆ. MPMಗೆ ಸೇರಿರತಕ್ಕಂಥ plantation rise ಏನು ಮಾಡಿದ್ದಾರೆ, ಅದು theft ಆಗಿ ಹೋಗುತ್ತಿದೆ. That has not been controlled by M.D. ಅದಕ್ಕೆ labours ಕಾರಣವಲ್ಲ. 75,000 ಹೆಕ್ಟೇರ್ ಇವತ್ತು ಅವರ ಆಡಳಿತದಲ್ಲಿದೆ. ಅದರಲ್ಲಿ ಎಲ್ಲಾ ಕಡೆ ಕೂಡ ಇವತ್ತು theft ಆಗುತ್ತಿದೆ.

ಅಧ್ಯಕ್ಷರು: ಸಚಿವರು ಉತ್ತರ ಹೇಳಿ.

ಶ್ರೀ ಮುರುಗೇಶ್ ರುದ್ರಪ್ಪ ನಿರಾಣಿ: ಮಾನ್ಯ ಅಧ್ಯಕ್ಷರೇ, ಈ ಎಂಪಿಎಂ ಸಕ್ಕರೆ ಕಾರ್ಖಾನೆ ನಮ್ಮ ರಾಜ್ಯದ ಒಂದು ಪ್ರತಿಷ್ಠಿತ ಸಂಸ್ಥೆಯಾಗಿರುವುದರಿಂದ, ಇದರಲ್ಲಿ ಯಾವುದೇ ರೀತಿಯ ರಾಜಕಾರಣವನ್ನು ಬೆಳೆಸಲಾರದೇ ಎಲ್ಲರೂ ಒಗ್ಗಟ್ಟಾಗಿ ಅಭಿವೃದ್ಧಿಗೆ ಸಹಕಾರ ಮಾಡಿದರೆ ಮುಂದಿನ ದಿವಸದಲ್ಲಿ ಮುಂದಿನ ಪೀಳಿಗೆಗೆ ಆ ಕಾರ್ಖಾನೆಯನ್ನು ಉಳಿಸಿಕೊಳ್ಳುವುದಕ್ಕೆ ಸಾಧ್ಯವಿದೆ. ಈ ಸಕ್ಕರೆ ಕಾರ್ಖಾನೆ ಬಗ್ಗೆ ನನಗೂ ಸ್ವಲ್ಪ ಅನುಭವವಿರುವುದರಿಂದ ಹೇಳುತ್ತೇನೆ. ಇಡೀ ದೇಶದಲ್ಲಿ ಬಿಜಾಪುರ ಬಾಗಲಕೋಟೆಗೆ ಒಂದೇ ಸಕ್ಕರೆ ಕಾರ್ಖಾನೆ ಇತ್ತು. ಹೆಚ್ಚಾಗಿರುವಂತಹ ಕಬ್ಬನ್ನು ಯಾವ ಕಾರ್ಖಾನೆಯವರು ತೆಗೆದುಕೊಳ್ಳುವುದಕ್ಕೆ ಆಗದಿರುವಂತಹ ಸಂದರ್ಭದಲ್ಲಿ ಆ ಕಬ್ಬನ್ನು ಕಡಿದು ರೈತರು ಒಡ್ಡಿಗೆ ಹಾಕಿ ಅದನ್ನು ಸುಟ್ಟು ರೈತರು ಬೀದಿಗೆ ಬರುವಂತಹ ಪರಿಸ್ಥಿತಿ ಇತ್ತು. ಅಂತಹ ಪರಿಸ್ಥಿತಿಯಲ್ಲಿ ಇಡೀ ದೇಶದಲ್ಲೇ 500 ಟನ್ ಸಾಮರ್ಥ್ಯದ ಸಕ್ಕರೆ ಕಾರ್ಖಾನೆಯನ್ನು 10 ವರ್ಷದ ಹಿಂದೆ ನಾವು ಪ್ರಾರಂಭ ಮಾಡಿದೆವು. ಅದನ್ನು ಹಂತ ಹಂತವಾಗಿ expansion ಮಾಡಿ, ಇವತ್ತು ಇಡೀ ದೇಶದಲ್ಲಿ ದೊಡ್ಡದಾಗಿರುವಂತಹ ಮುಧೋಳದಲ್ಲಿರುವಂತಹ ನಿರಾಣೀ ಸಕ್ಕರೆ ಕಾರ್ಖಾನೆ 15,000 ಟನ್ ಪ್ರತಿ ದಿವಸ ಕಬ್ಬು ಅರೆಯುವಂತಹ, 67 ಮೆಗಾವ್ಯಾಟ್

ವಿದ್ಯುತ್ತನ್ನು ಹಾಗೂ 1,20,000 ಲೀಟರ್ ಪೆಟ್ರೋಲ್ ತಯಾರು ಮಾಡುವಂತಹ ರೀತಿಯಲ್ಲಿ ನಾವು ಮಾಡಿದ್ದೇವೆ. ಈ ಅನುಭವದ ಹಿನ್ನೆಲೆಯಲ್ಲಿ ನಾನು ಎಂಪಿಎಂ ಎಲ್ಲಾ technical staffನವರನ್ನು, ಎಂಡಿ ಹಾಗೂ ಅಧ್ಯಕ್ಷರನ್ನು ಕರೆದಿದ್ದು, ಮಾನ್ಯ ಸಂಗಮೇಶ್ವರ್‌ರವರು ಕೂಡ ಅಂದು ಸಭೆಗೆ ಬಂದಿದ್ದರು. ಅವತ್ತು ಎಲ್ಲಾ ಕಡೆ ಕೇಳಿದರೆ ಬಹಳ mismatch equipments ಇದೆ. ಅವನ್ನೆಲ್ಲ balance ಮಾಡಿ very nominal investment ಮಾಡುವುದರಿಂದ ಆ ಕಾರ್ಖಾನೆಯನ್ನು ಲಾಭದಾಯಕವಾಗಿ ನಾವು ತರಬಹುದು, ಅದರ ಸಲುವಾಗಿ ಎಲ್ಲರೂ ಸಹಕಾರ ಮಾಡಬೇಕೆಂದು ವಿನಂತಿಯನ್ನು ಮಾಡಿದೆನು. ನಾನು ಇವತ್ತು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುವುದೇನೆಂದರೆ Central Government ನಿಂದ sugar development fund ಕೇವಲ 4%ನಲ್ಲಿ upto 90% ನವರೆಗೂ ಕೊಡುತ್ತಿದ್ದಾರೆ. ಅದನ್ನು ಎಂಪಿಎಂ ಶುಗರ್ ಫ್ಯಾಕ್ಟರಿಯಲ್ಲಿ ಉಪಯೋಗ ಮಾಡುತ್ತಿಲ್ಲ. ಅದು cane plantationಗೆ ಇರಬಹುದು, modernization and expansion ಮಾಡುವುದಕ್ಕೆ ಇರಬಹುದು, ಈ ರೀತಿಯ ಬೇರೆ ಬೇರೆ ಉದ್ದೇಶಕ್ಕೆ ಕೇಂದ್ರ ಸರ್ಕಾರದವರು ಕೊಡುತ್ತಿದ್ದಾರೆ.

ಶ್ರೀ ಪ್ರಕಾಶ್ ಬಿ ಹುಕ್ಕೇರಿ: ಮಾನ್ಯ ಅಧ್ಯಕ್ಷರೇ, ನಾವು ಹೇಳಬೇಕಾಗಿರುವುದನ್ನು ತಾವು ಹೇಳುತ್ತಿದ್ದೀರಿ. ನೀವು ದಯವಿಟ್ಟು ಅದನ್ನು ಮಾಡಿ. ತಾವು ಸಚಿವರಿದ್ದೀರಿ, ದಯವಿಟ್ಟು ನೀವು ಅದನ್ನು ಮಾಡಿ. ನಮಗೆ ನೀವು ಏಕೆ ಬುದ್ಧಿ ಹೇಳುತ್ತೀರಿ?

ಅಧ್ಯಕ್ಷರು: ಅವರು ಉತ್ತರ ಹೇಳಲಿ, ನೀವು ಅವರಿಗೆ ಉತ್ತರ ಹೇಳುವುದಕ್ಕೆ ಬಿಡದಿದ್ದರೆ ಹೇಗೆ? ಸಂಬಂಧ ಇಲ್ಲದಿರುವುದನ್ನೆಲ್ಲಾ ಕೇಳುತ್ತೀರಲ್ಲ.

(ಗೊಂದಲ)

ಶ್ರೀ ಪ್ರಕಾಶ್ ಬಿ. ಹುಕ್ಕೇರಿ: ಅವರು ಏನು ಹೇಳುತ್ತಿದ್ದಾರೆ ಎಂದರೆ ಹೀಗೆ ಮಾಡಿ, ಹಾಗೆ ಮಾಡಿ ಎಂದು ಹೇಳುತ್ತಿದ್ದಾರೆ. ನಾವು ನಿಮಗೆ ಮಾಡುವುದಕ್ಕೆ ಅಧಿಕಾರ ಕೊಟ್ಟಿದ್ದೇವೆ, ಹಾಗಾದರೆ ನೀವು ಮಾಡಿ.

ಶ್ರೀ ಮುರುಗೇಶ್ ರುದ್ರಪ್ಪ ನಿರಾಣಿ: ಮಾನ್ಯ ಅಧ್ಯಕ್ಷರೇ, ನಾನು ಹೇಳುತ್ತಿರುವುದೇನೆಂದರೆ ಮಾನ್ಯ ಸಂಗಮೇಶ್ವರ್‌ರವರು, ನಾನು ಈಗ ಅಧ್ಯಕ್ಷರಾದ ಅರಗ ಜ್ಞಾನೇಂದ್ರರವರು, ಎಂ.ಡಿ ಯವರು ಮತ್ತು

ಅಲ್ಲಿರುವಂತಹ technical staff ಎಲ್ಲರೂ ಪ್ರಯತ್ನ ಮಾಡಿದರೆ ನಿಜವಾಗಿ ಸಹ ಅದನ್ನು ಲಾಭದಾಯಕವಾಗಿ ತರುವುದಕ್ಕೆ ಸಾಧ್ಯವಿದೆ. ನಾವು ರಾಜ್ಯ ಮತ್ತು ಕೇಂದ್ರ ಸರ್ಕಾರದಿಂದ ಬರುತ್ತಿರುವಂಥ ಸವಲತ್ತುಗಳನ್ನು ಸರಿಯಾಗಿ ಉಪಯೋಗ ಮಾಡುತ್ತಿಲ್ಲ. ತಾವು ಏನು ಪ್ರಶ್ನೆಗಳನ್ನು ಕೇಳುತ್ತಿದ್ದೀರಿ ಅದು ಒಂದು ಭಾಗವಾದರೆ, ಮುಂದಿನ ದಿವಸದಲ್ಲಿ ಆ ಕಾರ್ಖಾನೆಯನ್ನು ಲಾಭದಾಯಕವಾಗಿ ತೆಗೆದುಕೊಂಡು ಹೋಗುವುದಕೆ ಸ್ಥಳೀಯ ಶಾಸಕರಾಗಿರುವಂತಹ ನಿಮ್ಮ, ಆಡಳಿತ ಮಂಡಳಿ ಹಾಗೂ ಈ ಸರ್ಕಾರದ ಬೃಹತ್ ಕೈಗಾರಿಕಾ ಸಚಿವರಾಗಿರುವಂತಹ ನನ್ನ ಜವಾಬ್ದಾರಿ ಕೂಡ ಇದೆ. ಅಲ್ಲಿ ಸಾಕಷ್ಟು mismatch equipments ಇರುವುದರಿಂದ ನೀವೂ ಸಹ ನಮಗೆ ಸಹಕಾರ ಮಾಡಿ. ನೀವು ಯಾವಾಗ ಹೇಳುತ್ತೀರಿ ಆಗ ಅಲ್ಲಿಗೆ ಬರುತ್ತೇನೆ. ನೀವು ಸಹ ನಮಗೆ ಸಹಕಾರ ನೀಡಿ, ನೀವು ಯಾವಾಗ ಹೇಳುತ್ತಿರೋ ಆಗ ನಾನು ಅಲ್ಲಿಗೆ ಬರುತ್ತೇನೆ. ನಾವು ರಾಜ್ಯಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಒಂದು ಮನವಿಯನ್ನು ಕೊಡೋಣ. ಕಬ್ಬು ನಾಟಿ ಮಾಡುವುದಕ್ಕೆ, ಇದನ್ನು development ಮಾಡುವುದಕ್ಕೆ Sugar Development fund ಏನು ಬರುತ್ತದೆ. ಅದನ್ನು ನಾವು ತರುವುದಕ್ಕೆ ಸಾಧ್ಯವಿದೆ, ಈ ಕೆಲಸವನ್ನು ನಾವೆಲ್ಲರೂ ಸೇರಿ ಮಾಡೋಣ. ಮಾನ್ಯ ಸಂಗಮೇಶ್ವರ್‌ರವರೆ, ನನಗೆ ಬಂದಿರುವ ಮಾಹಿತಿ ಪ್ರಕಾರ ಆ ದಿವಸ ನೀವು meeting ಮಾಡಿದಾಗ 3 ಗಂಟೆಯವರೆಗೆ ಅಧ್ಯಕ್ಷರು, ಎಂ.ಡಿಯವರು, ಎಲ್ಲಾ staffಗಳ ಜೊತೆಗೆ ನಮ್ಮ ಶಾಸಕರು ಅಲ್ಲಿ ಚರ್ಚೆಯನ್ನು ಮಾಡಿದ್ದಾರೆ. ಇದು ಆದ ನಂತರ ಇವರು ತಮ್ಮದೇ ಆದಂತಹ ಶಕ್ತಿ ಪ್ರದರ್ಶನಕ್ಕೆ ಬಂದಾಗ, ಈ ವಿಷಯ ನಾನು ತಿಳಿದುಕೊಂಡಿರುವುದು. ನನಗೆ ಗೌರವವಿದೆ, ಅವರು ಯಾವುದೇ ಶಾಸಕರಾಗಲಿ, ಯಾವುದೇ ಪಾರ್ಟಿಯವರಾಗಲಿ, ಯಾವುದೇ ಕ್ಷೇತ್ರದಿಂದ ಆರಿಸಿ ಬರಲಿ.....

ಶ್ರೀ ಬಿ.ಕೆ.ಸಂಗಮೇಶ್ವರ್: ಅದೆಲ್ಲಾ ಸುಳ್ಳು, ನಿಮಗೆ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ.

ಶ್ರೀ ಮುರುಗೇಶ್ ರುದ್ರಪ್ಪ ನಿರಾಣಿ: ಮಾನ್ಯ ಸಂಗಮೇಶ್ವರ್‌ರವರೆ, ಒಂದು ನಿಮಿಷ ಕುಳಿತುಕೊಳ್ಳಿ, ನಾನು ಪೂರ್ತಿ ಮಾತನಾಡಿದ ಮೇಲೆ ನೀವು ಮಾತನಾಡಿ. ಅಲ್ಲಿ 3 ಗಂಟೆಯವರೆಗೆ ಚರ್ಚೆಯಾದ ನಂತರ, ಇವರು ಬೇರೆ ಬೇರೆ ಕಡೆಯಿಂದ ಬಂದಿದ್ದರಿಂದ safety ಸಲುವಾಗಿ ಬಂದ್ ಮಾಡಿದ್ದಾರೆಂದು ತಿಳಿದುಬಂದಿದೆ. ನಿಮಗೆ ಅವರು ಸರಿಯಾದ ರೀತಿಯಲ್ಲಿ ಸಹಕಾರ

ಮಾಡದಿದ್ದರೆ, ನಿಮ್ಮ ನಿರ್ದೇಶನವನ್ನು, ಸಲಹೆಗಳನ್ನು ತೆಗೆದುಕೊಳ್ಳದಿದ್ದರೆ immediate ಆಗಿ ಆ ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟು, ಅವರ ಮೇಲೆ action ತೆಗೆದುಕೊಳ್ಳುವ ಕ್ರಮವನ್ನು ನಾನು ತೆಗೆದುಕೊಳ್ಳುತ್ತಿದ್ದೇನೆ. ದಯವಿಟ್ಟು ಈ ಸದನದಲ್ಲಿ ತಮಗೆ ವಿನಂತಿಯನ್ನು ಮಾಡುತ್ತಿದ್ದೇನೆ. ಆ ಕಾರ್ಖಾನೆಗೆ ಹೋದಾಗ ದಯವಿಟ್ಟು ರಾಜಕೀಯವನ್ನು ಬೆರೆಸಬೇಡಿ. ತಾವು ಆ ಕಾರ್ಖಾನೆಯ ಅಭಿವೃದ್ಧಿಗೆ ಸಲಹೆಗಳನ್ನು ಕೊಡಿ ಎಂದು ವಿನಂತಿ ಮಾಡುತ್ತಿದ್ದೇನೆ. ಇನ್ನು ಮಾನ್ಯ ಕಿಮ್ಮನೆ ರತ್ನಾಕರ್‌ರವರು ಒಂದು ಮಾತನ್ನು ಹೇಳಿದರು.

ಶ್ರೀ ಬಿ.ಕೆ.ಸಂಗಮೇಶ್ವರ್: ನಾವು ರಾಜಕೀಯ ಮಾಡುತ್ತಿಲ್ಲ. ರಾಜಕೀಯ ಮಾಡಿರುವುದು ನಿಮ್ಮ ಅಧ್ಯಕ್ಷರು, ನಿಮ್ಮ ಎಂ.ಡಿ.

ಶ್ರೀ ಮುರುಗೇಶ್ ರುದ್ರಪ್ಪ ನಿರಾಣಿ: ನಾನು ಮಾತನಾಡಿದ ಮೇಲೆ ನೀವು ಮಾತನಾಡಿ.

ಅಧ್ಯಕ್ಷರು: ಮಾನ್ಯ ಸಚಿವರು ಮಾತನಾಡಿ ಮುಗಿಸಲಿ.

ಶ್ರೀ ಬಿ.ಕೆ.ಸಂಗಮೇಶ್ವರ್: ಮಾನ್ಯ ಅಧ್ಯಕ್ಷರೆ, ಈಗ ಆಗಿರುವ ಅವಮಾನಕ್ಕೆ ಏನು action ತೆಗೆದುಕೊಳ್ಳುತ್ತಾರೆಂಬುದನ್ನು ಮಾನ್ಯ ಸಚಿವರು ಹೇಳಲಿ.

ಅಧ್ಯಕ್ಷರು: ಹೇಳುತ್ತಿದ್ದಾರಲ್ಲಾ..

ಶ್ರೀ ಮುರುಗೇಶ್ ರುದ್ರಪ್ಪ ನಿರಾಣಿ: ನಾನು ಮಾತನಾಡಿದ ಮೇಲೆ ನೀವು ಮಾತನಾಡಿ, ನಿಮಗೆ ಉತ್ತರವನ್ನು ಕೊಡುತ್ತೇನೆ. ಮಾನ್ಯ ಕಿಮ್ಮನೆ ರತ್ನಾಕರ್‌ರವರು ಒಂದು ಮಾತನ್ನು ಹೇಳಿದರು. ಸಕ್ಕರೆ ಬೆಲೆ ಹೆಚ್ಚು ಇದ್ದಾಗ ಸಕ್ಕರೆಯನ್ನು ಮಾರಾಟ ಮಾಡದೆ godownಗಳಲ್ಲಿ ಇಡುತ್ತಾರೆಂಬ ವಿಚಾರವನ್ನು ನಮ್ಮ ಗಮನಕ್ಕೆ ತಂದರು. ನಾವು ಸಕ್ಕರೆ ಉತ್ಪಾದನೆ ಮಾಡಿರುವಂಥದ್ದನ್ನು ಪ್ರತಿ ದಿವಸ ನಮ್ಮ ಮನಸ್ಸಿಗೆ ಬಂದಂತೆ ಕಾರ್ಖಾನೆಯವರು ತೆಗೆದುಕೊಂಡ ನಿರ್ಧಾರದಂತೆ ನಾವು ಸಕ್ಕರೆಯನ್ನು ಮಾರಾಟ ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೆ sugar control order ಇದೆ. ನಾವು ಪ್ರತಿ ತಿಂಗಳು ಉತ್ಪಾದನೆ ಮಾಡಿರುವಂಥದ್ದರಲ್ಲಿ ಅಂದಾಜು ಶೇ.50 ರಷ್ಟು ಮಾತ್ರ ನಾವು sale ಮಾಡಬೇಕಾಗುತ್ತದೆ. ಒಟ್ಟು 12 ತಿಂಗಳಲ್ಲಿ ಉತ್ಪಾದನೆ ಮಾಡಿರುವಂಥ ನಾವು 6 ತಿಂಗಳಿಗೆ ಮಾತ್ರ average ಆಗಿ ಕಬ್ಬು ಕಾರ್ಖಾನೆ ಪ್ರಾರಂಭದಲ್ಲಿರುತ್ತದೆ. ಅದನ್ನು divide ಮಾಡಿ ಮಧ್ಯವರ್ತಿಗಳಿಗೆ ಹೆಚ್ಚು ಲಾಭವಾಗಬಾರದು. ಅದನ್ನು godown ನಲ್ಲಿ stock ಇಟ್ಟುಕೊಂಡು ರೈತರಿಗೆ ಸಿಗುವ ಲಾಭ ತಪ್ಪಿ ಹೋಗಬಾರದೆಂಬ ಸಲುವಾಗಿ 12

ತಿಂಗಳುಗಳನ್ನು divide ಮಾಡಿ Central Government order ಕೊಟ್ಟಿರುವ ಪ್ರಕಾರ ನಾವು ಮಾಡುತ್ತಿರುತ್ತೇವೆ. ಹಾಗಾಗಿ ಇದು ಬರುವುದಿಲ್ಲವೆಂಬ ಮಾತನ್ನು ಹೇಳುತ್ತೇನೆ. ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರು ಕಳೆದ ತಿಂಗಳು 7ನೇ ತಾರೀಖಿನಂದು ಒಂದು ಸಭೆಯನ್ನು ಕರೆದು ಅಲ್ಲಿರುವ ಎಲ್ಲಾ ಸಾಧಕ–ಬಾಧಕಗಳನ್ನು ಚರ್ಚೆ ಮಾಡಿ ಇದರಿಂದ ಲಾಭದಾಯಕವಾಗಿ ಬರುವುದಕ್ಕೆ ಸಹಾಯ ಮತ್ತು ಸಹಕಾರ ಮಾಡುತ್ತೇನೆಂಬ ಮಾತನ್ನು ಹೇಳಿದ್ದಾರೆ.

ಶ್ರೀ ಬಿ.ಕೆ.ಸಂಗಮೇಶ್ವರ್: ಮಾನ್ಯ ಮುಖ್ಯಮಂತ್ರಿಯವರ ಸಭೆಗೆ ನಮ್ಮನ್ನು ಕರೆದಿಲ್ಲ.

ಶ್ರೀ ಮುರುಗೇಶ್ ರುದ್ರಪ್ಪ ನಿರಾಣಿ: ಅವರು ಇರಲಿಲ್ಲವೆಂದು ಕಾಣುತ್ತದೆ, ಎಲ್ಲರನ್ನು ಕರೆದಿರುತ್ತಾರೆ ಅಥವಾ ಅರ್ಜೆಂಟ್ ಆಗಿ ಸಭೆಯನ್ನು ಮಾಡಿರಬಹುದು.

ಶ್ರೀ ಬಿ.ಕೆ.ಸಂಗಮೇಶ್ವರ್: ನಾವು ಕರೆದಿದ್ದರೆ ಹೇಳುತ್ತಿದ್ದೆವು.

ಶ್ರೀ ಮುರುಗೇಶ್ ರುದ್ರಪ್ಪ ನಿರಾಣಿ: ಮಾನ್ಯ ಅಧ್ಯಕ್ಷರೆ, ಇದೇ ವಾರದಲ್ಲಿ ಸ್ಥಳೀಯ ಶಾಸಕರನ್ನು ಮತ್ತು ಸಕ್ಕರೆ ಕಾರ್ಖಾನೆಯ ಅಧ್ಯಕ್ಷರನ್ನು, ಎಂ.ಡಿ.ಯವರನ್ನು ಮತ್ತು ಟೆಕ್ನಿಕಲ್‌ನಲ್ಲಿದ್ದಂಥವರನ್ನು ಬೆಂಗಳೂರಿನಲ್ಲೆ MPM officeನಲ್ಲಿ ಕರೆದು ಏನೇನು ಸಮಸ್ಯೆಗಳು ಇವೆ. ಅದಕ್ಕೆ ಒಂದು ಪರಿಹಾರವನ್ನು ಹುಡುಕುವ ಪ್ರಯತ್ನವನ್ನು ಮಾಡುತ್ತೇನೆ.

ಶ್ರೀ ಬಿ.ಕೆ.ಸಂಗಮೇಶ್ವರ್: ಮಾನ್ಯ ಅಧ್ಯಕ್ಷರೆ, ಈಗ ಆಗಿರುವ ಅವಮಾನಕ್ಕೆ ಇದನ್ನು ಹಕ್ಕು ಬಾಧ್ಯತೆಗಳ ಸಮಿತಿಗೆ refer ಮಾಡಿ.

ಅಧ್ಯಕ್ಷರು: ನೀವು notice ಕೊಡಿ. ಮಾನ್ಯ ಸಚಿವರು ತಪ್ಪು ಇದ್ದರೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದರು.

ಶ್ರೀ ಬಿ.ಕೆ.ಸಂಗಮೇಶ್ವರ್: ಆಯಿತು.

ಶ್ರೀ ಸಿದ್ಧರಾಮಯ್ಯ: ಮಾನ್ಯ ಅಧ್ಯಕ್ಷರೆ, notice ಕೊಡುವುದು ಒಂದು ಭಾಗ. ಮಾನ್ಯ ಮುರುಗೇಶ್ ರುದ್ರಪ್ಪ ನಿರಾಣಿಯವರೆ, ನೀವು ನಿಮಗೆ ಬಂದಿರುವ information ಪ್ರಕಾರ ಎಂದು ಹೇಳುವುದಕ್ಕೆ ಹೋಗಬೇಡಿ. ಮಾನ್ಯ ಸದಸ್ಯರು ಸದನದಲ್ಲಿ ಇಷ್ಟು ಜನರ ಎದುರಿನಲ್ಲಿ ಸುಳ್ಳು ಹೇಳುತ್ತಾರೆಯೇ? ಅವರು ಏನೇ ಹೇಳಬಹುದು, ಅವರು defenceನಲ್ಲಿರುವಾಗ ಏನೋ ಹೇಳುತ್ತಾರೆ. ಅವರು ಆರೋಪಿ ಸ್ಥಾನದಲ್ಲಿರುವವರು ಸತ್ಯವನ್ನು ಹೇಳುತ್ತಾರೆಯೇ?

ಈಗ ನಾನು ಏನು ಹೇಳುತ್ತೇನೆಂದರೆ ಎಂ.ಎಲ್.ಎ.ಗಳು ಸದನದಲ್ಲಿ ಬಂದು ನನಗೆ ಅವಮಾನ ಮಾಡಿದರು, 4–5 ಗಂಟೆಗಳ ಕಾಲ ಒಳಗಡೆ ಬಿಡಲಿಲ್ಲ, ಕಾಯಿಸಿದ್ದಾರೆಂದು ಹೇಳಿದ ಮೇಲೆ, ನೀವು ಮಂತ್ರಿಗಳಾಗಿ ಸುಮ್ಮನೆ ಇರುತ್ತೀರಾ? ಏನು ಮಾಡಬೇಕು ಹೇಳಿ. ಅವರು ಅವರ ಕ್ಷೇತ್ರದಲ್ಲಿ ಕೆಲಸ ಮಾಡಬೇಕೊ, ಬೇಡವೊ? ಅಲ್ಲಿರುವಂಥ ಎಲ್ಲಾ ಕಾರ್ಮಿಕರು ಅವರ ಕ್ಷೇತ್ರದಲ್ಲೆ ಇರುವವರು, ಅವರ ಎದುರು ಈ ರೀತಿ ಆದರೆ, ಅವರ image ಏನು ಆಗುತ್ತದೆ? ಇವರ prestige ಏನು ಆಗುತ್ತದೆ? ಒಬ್ಬ ಅಧಿಕಾರಿ ಎಂ.ಡಿ. ಅಲ್ಲಿರುವವರು ಇವರನ್ನು 4 ಗಂಟೆಗಳ ಕಾಲ ಒಳಗಡೆ ಬಿಡದೇ ಹೊರಗಡೆ ನಿಲ್ಲಿಸಿದರೆ ಅವರ ಪರಿಸ್ಥಿತಿ ಏನು? ಇದಕ್ಕೆ ಪರಿಹಾರ ಏನು? ದಯವಿಟ್ಟು ನೀವು ಇದನ್ನು prestige ಮಾಡಿಕೊಳ್ಳುವುದಕ್ಕೆ ಹೋಗಬೇಡಿ. Please take action against that officer. ಅವರು ಯಾರೇ ಆಗಿರಲಿ, ಇವತ್ತು ನೀವು ಇರಬಹುದು, ನಾಳೆ ನಾವು ಅಧಿಕಾರಕ್ಕೆ ಬರಬಹುದು. ನೀವು ಈ ಕಡೆ ಕುಳಿತುಕೊಳ್ಳಬಹುದು. ಇಲ್ಲಿ ನಿಮ್ಮದು ಜವಾಬ್ದಾರಿ ಇದೆ, ಅಲ್ಲಿ ಅವರದು ಜವಾಬ್ದಾರಿ ಇದೆ.

ಶ್ರೀ ಮುರುಗೇಶ್ ರುದ್ರಪ್ಪ ನಿರಾಣಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ನಮ್ಮ ಗಮನಕ್ಕೆ ಏನು ತಂದಿದ್ದಾರೆ, ಅದನ್ನು immediate ಪರಿಶೀಲಿಸುತ್ತೇನೆ. ಅವರು ಯಾವುದೇ ಅಧಿಕಾರಿ ಇರಬಹುದು, ಎಂ.ಡಿ. ಇರಬಹುದು, ಬೇರೆ ಯಾವುದೇ ಅಧಿಕಾರಿ ಇರಬಹುದು. ಇದನ್ನು ಚರ್ಚೆ ಮಾಡಿ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು: ಡಾ:ಎಂ.ಸಿ.ಸುಧಾಕರ್‌ರವರು.. ..

ಶ್ರೀ ಕಿಮ್ಮನೆ ರತ್ನಾಕರ್: ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ ಮಾನ್ಯ ಸಚಿವರು ತುಟ್ಟಿಭತ್ಯೆ ಬಗ್ಗೆ ಏನು ಹೇಳಲಿಲ್ಲ.

ಅಧ್ಯಕ್ಷರು: ಇಲ್ಲ, ಡಾ:ಎಂ.ಸಿ.ಸುಧಾಕರ್‌ರವರನ್ನು ಕರೆದಿದ್ದೇನೆ.

ಇ) ವಿಷಯ: ತಾಲ್ಲೂಕು ಪಂಚಾಯತ್ ವ್ಯಾಪ್ತಿಗೆ ಸೇರಿದ ವಸತಿ ಗೃಹಗಳಲ್ಲಿ ಹಲವಾರು ವರ್ಷಗಳಿಂದ ಬಾಡಿಗೆ ನೀಡದೆ ಅನಧಿಕೃತವಾಗಿ ವಾಸ ಮಾಡುತ್ತಿರುವವರನ್ನು ಖಾಲಿ ಮಾಡಿಸದಿರುವ ಬಗ್ಗೆ.

****

ಡಾ:ಎಂ.ಸಿ. ಸುಧಾಕರ್ (ಚಿಂತಾಮಣಿ): ಮಾನ್ಯ ಅಧ್ಯಕ್ಷರೆ, ಚಿಂತಾಮಣಿ ತಾಲ್ಲೂಕು ಪಂಚಾಯತ್ ವ್ಯಾಪ್ತಿಯಲ್ಲಿ ಇರುವ ವಸತಿ ಗೃಹಗಳಲ್ಲಿ ಹಲವಾರು